ಶ್ರೀ ಜೆ. ಎಲ್. ಕಬಾಡಿ.—ಈಗತಾನೆ ಮಾನ್ಯ ಸಚಿವರು ಅಪ್ಪಣೆ ಕೊಡಿಸಿದ ಲೆದರ್ ಡೆವಲಪ್‌ಮೆಂಟ್ ಬೋರ್ಡು ಅಸ್ತಿತ್ವಕ್ಕೆ ಬರಬೇಕಾದರೆ ಇನ್ನೂ 4-5 ತಿಂಗಳ ಕಾಲ ಹಿಡಿಯುವುದರಿಂದ ಅಲ್ಲಿ ಈ ಚರ್ಮಕಾರರ ಪರಿಸ್ಥಿತಿ ಬಹಳ ಹದಗೆಟ್ಟಿರುವುದರಿಂದ ತಾತ್ಕಾಲಿಕವಾಗಿ ಇವರಿಗೆ ಕೈಗಾರಿಕಾ ಇರಾಖೆಯಿಂದ ಸಾಲವನ್ನು ಕೊಡುವಂತೆ ಮಾಡುವುದಕ್ಕೆ ಸರ್ಕಾರದವರು ಏಕೆ ಒಂದು ವ್ಯವಸ್ಥೆ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಅದು ಸಾಧ್ಯವಿಲ್ಲ. ಆದಷ್ಟೂ ಜಾಗ್ರತೆಯಾಗಿ ಅವರ ಹಿತಾಸಕ್ತಿಯನ್ನು ಕಾಪಾಡಬೇಕೆಂತಲೇ ಸರ್ಕಾರದವರೀಗ ಈ ಲೆದರ್ ಡೆವಲಪ್‌ಮೆಂಟ್ ಬೋರ್ಡನ್ನು ಮಾಡುತ್ತಿರುವುದು. ಅದನ್ನು ಮಾಡಿ ಅವರ ಹೆಗಲ ಮೇಲೆ ಇದರ ಜವಾಬ್ದಾರಿಯನ್ನು ಹೊರಿಸಬೇಕೆಂಬುದು ಸರ್ಕಾರದವರ ಇಚ್ಛೆ.

ಶ್ರೀ ಜೆ. ಎಲ್. ಕಬಾಡಿ.—ಇಲ್ಲವೇ ಸರ್ಕಾರದವರು ಲೆದರ್ ಬೇಸ್ಡ್ ಇಂಡಸ್ಟ್ರೀಸ್ ಅಂತ ಲಾದರೂ ಒಂದು ಮಾಡಿ ಇಲ್ಲವೇ ಲೆದರ್ ಫೈನಾನ್ಷಿಯಲ್ ಕಾರ್ಪೊರೇಷನ್ ಎಂದು ಮಾಡಿ ಇವರಿಗೆ ಸಹಾಯ ಮಾಡುವುದಕ್ಕೆ ಒಂದು ಏರ್ಪಾಡನ್ನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಸರಕಾರದವರು ಆ ಡೆವಲಪ್‌ಮೆಂಟ್ ಬೋರ್ಡಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಹಣವನ್ನು ಸಹಾಯ ಮಾಡುವಂತೆ ಮಾಡಲು ಏರ್ಪಾಡನ್ನು ಮಾಡುತ್ತಿದ್ದಾರೆ.

ಶ್ರೀಮತಿ ರಾಧಾ ಭಟ್.—ಚರ್ಮಗಾರರಿಗೆ ನೆರವನ್ನು ಹೆಚ್ಚಿಸಲಾಗುವುದೇ ? ಅಂಕೋಲ ತಾಲ್ಲೂಕಿನಲ್ಲಿ ಚರ್ಮಕಾರರಿಗೆ ಬಹಳ ಕಷ್ಟವಿದೆ. ಅವರ ಕಷ್ಟ ಪರಿಹಾರ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎಸ್. ಎಂ. ಕೃಷ್ಣ.—ಅಂಕೋಲ ತಾಲ್ಲೂಕಿನಲ್ಲಿ ಮೂರು ಸೊಸೈಟಿಗಳಿವೆ. ಅವುಗಳಲ್ಲಿ ಒಂದು ಕೆಲಸಮಾಡುತ್ತಿದೆ, ಎರಡು ಕೆಲಸ ಮಾಡುತ್ತಿಲ್ಲ. ಈಗ ಕೆಲಸಮಾಡುತ್ತಿರುವ ಸೊಸೈಟಿಗೆ ಖಾದಿ ಬೋರ್ಡ್‌ನಿಂದ ಸಹಾಯವಾಡಲು ಏರ್ಪಾಡು ಮಾಡಬಹುದು. ಆದರೆ ಕೆಲಸ ಮಾಡದಿರುವ ಸೊಸೈಟಿ ಪುನರುಜ್ಜೀವಗೊಳಿಸಿ ಅವುಗಳು ತಮ್ಮ ಕಾಲಮೇಲೆ ನಿಂತುಕೊಳ್ಳುವಂತೆ ಮಾಡಲು ಸಾಧ್ಯವೇ ಎಂದು ಖಾದಿ ಬೋರ್ಡು ಪರಿಶೀಲಿಸುವಂತೆ ತಿಳಿಸುತ್ತೇವೆ.

MADAM SPEAKER.—Question No. 474 is held over.

APPOINTMENT TO THE POST OF PRINCIPAL OF S. J. POLYTECHNIC, BANGALORE.

974. Sri H. G. CHANNAPPA (Magadi).—

Will the Minister for Education be pleased to state :—

(*a*) whether the post of Principal of S. J. Polytechnic Bangalore has been upgraded ; if so, to what grade ;

(*b*) whether the person holding this post at present is the senior most officer in the Department ; if not, the reasons for appointing him to this post ;

(*c*) whether the cadre and recruitment rules in respect of this post have been framed ; if not, the reason for the same and the action taken to frame the Cadre and Recruitment Rules ?

Sri A. R. BHADARINARAYANA (Minister for Education).—

(*a*) (i) Yes.

(ii) Rs. 1000-1500.

(*b*) (i) No.

(ii) He has not been appointed against the upgraded post of Principal, S. J. Polytechnic, Bangalore.

(*c*) (i) No.

(ii) Framing of Cadre and Recruitment Rules for the post is under active consideration of Government.

ಶ್ರೀ ಎಚ್. ಜಿ. ಚನ್ನಪ್ಪ.—ಎಸ್.ಜೆ. ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರನ್ನು ನೇಮಕ ಮಾಡಿರುವ ಸಂದರ್ಭದಲ್ಲಿ ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಲಾಗಿದೆ ಎಂದು ಹೇಳುವುದು ನಿಜವೇ ?

† ಶ್ರೀ ಎ. ಆರ್. ಬದರಿನಾಯಣ್.—ಓವರ್‌ಲುಕ್ ಮಾಡಿ ನೇಮಿಸಿಲ್ಲ. ಈಗ ನೇಮಕ ಪಾಗಿರುವವರ ಮೇಲೆ ಮೂರು ಜನರಿದ್ದಾರೆ, ಪ್ರೊಫೆಸರ್ ಗುರುಬಸಪ್ಪ, ನಟರಾಜನ್ ಮತ್ತು ನಾಗಾನಂದ ಎನ್ನುವವರು ಇದ್ದಾರೆ. ಅವರು ಸೀನಿಯರ್ಸ್. ಅವರು ಬೇರೆ ಕೆಲಸಗಳಲ್ಲಿ ಇರುವುದ ರಿಂದ ತಾತ್ಕಾಲಿಕವಾಗಿ ಒಂದು ವ್ಯವಸ್ಥೆ ಮಾಡಿದೆ.

ಶ್ರೀ ಎಚ್. ಜಿ. ಚನ್ನಪ್ಪ.—ಈಗ ನೇಮಕ ಮಾಡಿರುವುದು ನಿಯಮಗಳಿಗೆ ವಿರೋಧ ವಾಗಿಲ್ಲವೇ ?

ಶ್ರೀ ಎ. ಆರ್. ಬದರಿನಾಯಣ್.—ಹುದ್ದೆಯನ್ನು ಅಪ್‌ಗ್ರೇಡ್ ಮಾಡಿದೆ. ಅದಕ್ಕೆ ಯಾವ ರೀತಿ ರೆಕ್ರೂಟ್ ಮಾಡಬೇಕು ಎಂಬುದಕ್ಕೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಸಿದ್ಧವಾಗಿಲ್ಲ, ಅದರ ಪ್ರಕಾರ ಅರ್ಹರಾದವರು ಅದಕ್ಕೆ ಅರ್ಜಿ ಹಾಕಬೇಕು. ನಂತರ ಒಂದು ನಿರ್ಣಯ ಮಾಡ ಲಾಗುವುದು. ಈಗ ತಾತ್ಕಾಲಿಕವಾದ ವ್ಯವಸ್ಥೆ ಮಾಡಲಾಗಿದೆ.

Sri C. M. ARUMUGHAM.—May I know the reason for upgrading the post? Were any additional subjects introduced or any expansion done?

Sri A. R. BADARINARAYANA.—Specialised courses have been sanctioned for the Polytechnic and so it was considered that the post has got to be upgraded in view of the increasing opportunities given to the students.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಹುದ್ದೆಗೆ ಭರ್ತಿ ಮಾಡುವಾಗ ಈಗ ಹೇಳಿದಂತೆ ಇರುವ 4 ಜನರನ್ನು ಸ್ಕ್ರೀನ್ ಮಾಡಿ ಭರ್ತಿ ಮಾಡುವಿರಾ ಅಥವಾ ಹೊರಗಿನ ವತಿಯಿಂದ ಯಾರನ್ನಾದರೂ ತರುವ ಯೋಚನೆಯಿದೆಯೋ ?

ಶ್ರೀ ಎ. ಆರ್. ಬದರಿನಾರಾಯಣ್.—ಫಸ್ಟ್ ಕ್ಲಾಸ್ ಪೋಸ್ಟ್‌ಗಳು ಬೇರೆ ಕಡೆ ಇರುವ ಪಾಲಿಟೆಕ್ನಿಕ್‌ಗಳಲ್ಲೂ ಇವೆ; ಅಲ್ಲಿರುವವರಿಗೂ ಅವಕಾಶ ಕೊಡಬೇಕು. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಯಾವ ರೀತಿ ಮಾಡಬೇಕೆಂದು ನೋಡಿ ಅಡ್ವರ್ಟೈಜಮೆಂಟ್ ಮಾಡಿ ಪೋಸ್ಟ್ ಭರ್ತಿ ಮಾಡಬೇಕಾಗುವುದು.

Sri C. M. ARUMUGHAM.—For how many years the present Principal has been there in that Polytechnic? Is there any complaint that he is inefficient in conducting the Institution? If not, what is the reason for not confirming him as the Principal in the upgraded post?

Sri A. R. BADARINARAYANA.—He has been there for quite a number of years. I cannot exactly tell you ; it may be six or seven years. Nobody has complained against his work but there is a method of recruitment which has got to be adopted. It is not as if because a person has been acting in a post he has got to be confirmed. He has been there because there has not been an equivalent post where he can be posted.

Sri C. M. ARUMUGHAM.—Was he acting as Principal or was he made permanent ? How long has he been there ?

Sri A. R. BADARINARAYANA.—He is acting as Principal ; he has been there since 6 or 7 years as I said earlier.

KUDREMUKH IRON ORE PROJECT

1018. Smt. ADDY SALDHANA (Mangalore) :—

Will the Minister for Industries be pleased to state :—

(*a*) the present stage of Kudremukh iron ore project;

(*b*) whether Government would expedite the same and take steps for early commissioning of this project ?

Sri S. M. KRISHNA (Minister for Industries) :—

(*a*) After investigation and testing, detailed project report has been prepared jointly by the National Mineral Development Corporation, Marcona Corporation of USA and three Japanese Companies.

(*b*) Yes.

Smt. ADDY SALDHANA.—Is it a fact that these companies have backed out and the iron ore project is at a standstill ?

†Sri S. M. KRISHNA.—It is not a fact that these companies have backed out. Very recently, I have information that a high-power official team went to Japan to negotiate with the Japanese buyers. The Japanese buyers have reiterated their willingness to buy ores from India but they do not want it in the form of slurry but they want it in the form of shinters. The Government of India team has come back to the country and is working out the details of the changed methodology.

Smt. ADDY SALDHANA.—When will the iron ore that has been stored, be cleared ?

Sri S.M. KRISHNA.—Whenever it is ready for shipment.

Sri H. S. SIDDAPPA.—Sir, you have said that after investigation and testing, detailed project report has been prepared jointly by the National Mineral Development Corporation, Marcona Corporation